**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.</u>**

**<u>ಸಿ ಸಿ ನಂ. 33/2019</u>**

**<u>ಫಿರ್ಯಾದಿದಾರರು :-</u>** ನೆಲೋಗಿ ಪೊಲೀಸ್ ಠಾಣೆ

**: ವಿರುದ್ದ :**

**<u>ಆರೋಪಿತರು:</u>**

1. ನಾಗಪ್ಪ ತಂದೆ ಅವಣ್ಣಾ ಗೊಳುರ,
ವಃ 25 ವರ್ಷ, ಉಃ ಚಾಲಕ

2. ಸಿದ್ದಣ್ಣಾ ತಂದೆ ಅವಣ್ಣಾ ಗೊಳುರ,
ವಃ 24 ವರ್ಷ, ಉಃ ಒಕ್ಕಲುತನ,

3. ಅಮೀನಸಾಬ ತಂದೆ ನಬಿಸಾಬ,
ವಃ 75 ವರ್ಷ, ಉಃ ಒಕ್ಕಲುತನ
**(ಆ-3 ಮೃತ ಹೊಂದಿದ್ದರಿಂದ ಆತನ ವಿರುದ್ದ ಪ್ರಕರಣ ಕೈಬಿಡಲಾಗಿದೆ)**

ಎಲ್ಲರೂ ಸಾಃ ಹರವಾಳ, ತಾಃ ಜೇವರ್ಗಿ,

**<u>ದೋಷಾರೋಪಣೆ</u>**

**ಶ್ರೀ ಕಾಶಿನಾಥ ವಿ. ಉಪ್ಪಾರ್, ಬಿ.ಎಸ್.ಸಿ. ಎಲ್ಎಲ್.ಬಿ.,** ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜೇವರ್ಗಿ, ಆದ ನಾನು, ಆರೋಪಿತರಾದ ನಿಮ್ಮ ವಿರುದ್ದ ಈ ಕೆಳಕಾಣಿಸಿದ ಅಪಾದನೆಗಳನ್ನು ರೂಪಿಸಿರುತ್ತೆನೆ.

ಆರೋಪಿತರಾದ ನೀವು ದಿನಾಂಕ 26-06-2015 ರಂದು ಬೆಳಗಿನ ಜಾವ 02-30 ಗಂಟೆ ಸಮಯದಲ್ಲಿ ನೆಲೋಗಿ ಪೊಲೀಸ ಠಾಣೆ ವ್ಯಾಪ್ತಿಯಲ್ಲಿ ಬರುವ ಹರವಾಳ ಗ್ರಾಮದ ಭೀಮಾ ನದಿಯಿಂದ 3ನೇ ಆರೋಪಿತನ ಜೊತೆ ಸೇರಿಕೊಂಡು 1 ಮತ್ತು 2ನೇ ಆರೋಪಿತರು ತಮ್ಮ ಟ್ರ್ಯಾಕ್ಟರ ಇಂಜಿನ ನಂ.44-1024stk-177676 ಚೆಸ್ಸಿ ನಂ.wxc-04606006225 ಮತ್ತು ಟ್ರೈಲರ ನಂ.ಕೆಎ-32/ಟಿ-1124-6118 ನೆದ್ದರಲ್ಲಿ ಯಾವುದೇ ಅಧಿಕೃತ ಪರವಾನಿಗೆ ಇಲ್ಲದೆ, ಕಳ್ಳತನ ಮಾಡುವ ಉದ್ದೇಶದಿಂದ ಸದರಿ ಟ್ರ್ಯಾಕ್ಟರಗಳಲ್ಲಿ

ಮರಳನ್ನು ಕಳ್ಳತನದಿಂದ ಸಾಗಾಣಿಕೆ ಮಾಡಿರುತ್ತಿರಿ, ಆದ್ದರಿಂದ ನೀವು ಭಾ. ದಂ. ಸಂ. ಕಲಂ 379 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಿರಿ, ಅದು ನನ್ನ ಸಂಜ್ಞೆಯ ಅಡಿಯಲ್ಲಿ ಬರುತ್ತದೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಮೃತ 3ನೇ ಆರೋಪಿತನ ಜೊತೆ ಸೇರಿಕೊಂಡು 1 ಮತ್ತು 2ನೇಆರೋಪಿತರು ಅಕ್ರಮವಾಗಿ ಮರಳನ್ನು ತುಂಬಿ ಸಾರ್ವಜನಿಕ ಸ್ವತ್ತಿಗೆ ಹಾನಿಯುಂಟು ಮಾಡಿದ್ದು, ಆ ಮೂಲಕ ಕಲಂ 3 ಪಿಡಿಪಿಪಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಿರಿ, ಅದು ನನ್ನ ಸಂಜ್ಞೆಯ ಅಡಿಯಲ್ಲಿ ಬರುತ್ತದೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2ನೇ ಆರೋಪಿತರು ಮೋಲೆ ನಮೂದಿಸಿದ ವಾಹನವನ್ನು ಚಾಲನಾ ಪರವಾನಿಗೆ ಪತ್ರ ಇಲ್ಲದೆ ಸಾರ್ವಜನಿಕ ಸ್ಥಳದಲ್ಲಿ ಚಾಲನೆ ಮಾಡಿದ್ದು, ಆ ಮೂಲಕ ಭಾ ಮೋ ವಾಹನ ಕಾಯ್ದೆ ಕಲಂ 181 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಿರಿ, ಅದು ನನ್ನ ಸಂಜ್ಞೆಯ ಅಡಿಯಲ್ಲಿ ಬರುತ್ತದೆ.

ನೀವು ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕ **01-06-2026** ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ.

**ಆರೋಪಿಗಳ ಹೇಳಿಕೆ**

ಪ್ರಶ್ನೆ-1: ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ ಆರೋಪಣೆಯನ್ನು ಅರ್ಥಮಾಡಿಕೊಂಡಿದಿರಾ?

ಉ: ಆ-1 ಆ-2

ಪ್ರಶ್ನೆ -2: ಆರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೆ?

ಉ: ಆ-1 ಆ-2

(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಕೊಟ್ಟಂತಹ ಹೇಳಿಕೆಗಳು

ಆರೋಪಿತರ ನಿಜವಾದ ಹೇಳಿಕೆಗಳಿರುತ್ತವೆಂದು ಪ್ರಮಾಣಿಕರಿಸಲಾಗಿದೆ)

ದಿನಾಂಕ **01-06-2026** ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.